ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಸಂಖ್ಯೆ: ಕವಿಪ್ರನಿನಿ/ಬಿ16/ಬಿ100/3736/2019-20

ದಿನಾಂಕ : 18 NOV 2021

## ಸುತ್ತೋಲೆ

**ವಿಷಯ:** ಮೀಸಲಾತಿ ಆದೇಶಗಳನ್ನು ಪಾಲಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 10 ಎಸ್‌ಬಿಸಿ 97 ದಿನಾಂಕ: 24.06.1997 ನ್ನು ಅಳವಡಿಸಿಕೊಂಡು ಹೊರಡಿಸಲಾದ ಮಂಡಳಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3565/98-99 ದಿನಾಂಕ: 04.02.1999.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23 (i) ಸೇನೆನಿ 2015 ದಿನಾಂಕ: 04.03.2015 ನ್ನು ಅಳವಡಿಸಿಕೊಂಡು ಹೊರಡಿಸಲಾದ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5411/96-97 ದಿನಾಂಕ: 05.04.2016.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 44 ಶಾಸನ 2017 ದಿನಾಂಕ: 23.06.2018.
4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ100/3736/2019-20, ದಿನಾಂಕ: 18.05.2019 ಮತ್ತು 09.07.2019.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 06.09.2021.

*****

ದಿನಾಂಕ: 21.10.2021 ರಂದು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಕೆಲವು ಇಲಾಖೆಗಳಲ್ಲಿ ಮುಂಬಡ್ತಿ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡುವ ವಿಷಯದಲ್ಲಿ ಸರ್ಕಾರದ ದಿನಾಂಕ: 24.06.1997, 04.03.2015 ರ ಸರ್ಕಾರದ ಆದೇಶಗಳನ್ನು ಹಾಗೂ ದಿನಾಂಕ 23.06.2018 ರ ಅಧಿಸೂಚನೆಯಲ್ಲಿ ಹೊರಡಿಸಲಾದ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017 ಅನ್ನು ಪಾಲಿಸದೇ ಇರುವುದನ್ನು ಗಮನಿಸಲಾಗಿದೆ ಮತ್ತು ಆಕ್ಷೇಪವನ್ನು ವ್ಯಕ್ತಪಡಿಸಲಾಗಿದೆ ಎಂದು ಸರ್ಕಾರದ ಉಲ್ಲೇಖ-5 ರ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ.

ಮುಂದುವರೆದು, ಸದರಿ ಸುತ್ತೋಲೆಯಲ್ಲಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಉಲ್ಲೇಖಿತ (1) ಮತ್ತು (2) ರ ಸರ್ಕಾರದ ಆದೇಶಗಳ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿರುತ್ತದೆ ಮತ್ತು ಉಲ್ಲೇಖ (3) ರ ಅಧಿಸೂಚನೆಯಲ್ಲಿ ಹೊರಡಿಸಲಾದ 2017 ರ ಅಧಿನಿಯಮವನ್ನು ಸಹ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸುವಂತೆ ಸೂಚಿಸಲಾಗಿದೆ.

ಈ ಹಿನ್ನಲೆಯಲ್ಲಿ, ಸರ್ಕಾರದ ದಿನಾಂಕ 06.09.2021 ರ ಸುತ್ತೋಲೆಯನ್ನು **'ಅನುಬಂಧ'** ಎಂದು ಲಗತ್ತಿಸುತ್ತಾ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಸರ್ಕಾರದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸಂಬಂಧಪಟ್ಟ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ಸೂಚಿಸಲಾಗಿದೆ. ಇದರಲ್ಲಿ ಯಾವುದೇ ಲೋಪ ಉಂಟಾದಲ್ಲಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಿಗಳೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು
(ಆಡಳಿತ ಮತ್ತು ಮಾ.ಸಂ.)

<u>ಗೆ:</u>

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.

2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಕವಿಪ್ರನಿನಿ/ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in/ for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ</u> :**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.

ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 186 ಎಸ್‌ಆರ್ ಎಸ್ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು,ದಿನಾಂಕ: 06-09-2021.

## ಸುತ್ತೋಲೆ

**ವಿಷಯ**: ಮೀಸಲಾತಿ ಆದೇಶಗಳನ್ನು ಪಾಲಿಸುವ ಬಗ್ಗೆ.

**ಉಲ್ಲೇಖ:** 1) ದಿನಾಂಕ: 21-01-2021ರಂದು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿಗಳು.
2) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 10 ಎಸ್ ಬಿ ಸಿ 97, ದಿನಾಂಕ: 24.06.1997.
3) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23(i) ಸೇನೆನಿ 2015, ದಿನಾಂಕ:04.03.2015.
4) ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 44 ಶಾಸನ 2017, ದಿನಾಂಕ: 23.06.2018.

* * * * *

1. ದಿನಾಂಕ: 21.01.2021ರಂದು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಉಲ್ಲೇಖಿತ (1)ರ ಸಭೆಯಲ್ಲಿ ಕೆಲವು ಇಲಾಖೆಗಳು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖಿತ (2) ಮತ್ತು (3)ರ ದಿನಾಂಕ 24.06.1997 ಮತ್ತು 04.03.2015ರ ಸರ್ಕಾರಿ ಆದೇಶಗಳನ್ನು ಹಾಗೂ ಉಲ್ಲೇಖಿತ (4)ರ ದಿನಾಂಕ 23.06.2018ರ ಅಧಿಸೂಚನೆಯಲ್ಲಿ ಹೊರಡಿಸಲಾದ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017 ಅನ್ನು ಪಾಲಿಸದೇ ಇರುವುದನ್ನು ಗಮನಿಸಲಾಗಿದೆ ಹಾಗೂ ಆಕ್ಷೇಪವನ್ನು ವ್ಯಕ್ತಪಡಿಸಲಾಗಿದೆ.

2. ಉಲ್ಲೇಖಿತ (2)ರ ದಿನಾಂಕ: 24.6.1997ರ ಸರ್ಕಾರಿ ಆದೇಶದಲ್ಲಿ ಮುಂಬಡ್ತಿಯಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಪರಿಶಿಷ್ಟ ಜಾತಿಯ ನೌಕರರಿಗೆ ಹೆಚ್ಚುವರಿ ರೋಸ್ಟರ್ ಬಿಂದುಗಳಾದ 5, 9, 11, 18, 20, 24, 26, 30 ಮತ್ತು 32ಗಳನ್ನು ಹಾಗೂ ಪರಿಶಿಷ್ಟ ಪಂಗಡದ ನೌಕರರಿಗೆ ಹೆಚ್ಚುವರಿ ಬಿಂದು 16 ಅನ್ನು ಗುರುತಿಸಿ ಆದೇಶಿಸಲಾಗಿದೆ. ಉಲ್ಲೇಖಿತ (3)ರ ದಿನಾಂಕ:04.03.2015ರ ಸರ್ಕಾರಿ ಆದೇಶದಲ್ಲಿ, ದಿನಾಂಕ: 24.6.1997ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಲಾಗಿದ್ದ ಹೆಚ್ಚುವರಿ ರೋಸ್ಟರ್ ಬಿಂದುಗಳನ್ನು ರದ್ದುಗೊಳಿಸಿ, ಪರಿಶಿಷ್ಟ ಜಾತಿ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ಒದಗಿಸಲು 33 ರೋಸ್ಟರ್ ಬಿಂದುಗಳ ವರ್ತುಲದಲ್ಲಿ ಹಾಲಿ ನಿಗದಿಪಡಿಸಿರುವ 1, 7, 14, 21, 27ನೇ ಬಿಂದುಗಳ ಜೊತೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆಗೆ ಸೀಮಿತಗೊಳಿಸಿ, ಅರ್ಹ ನೌಕರರ ಲಭ್ಯತೆಯನ್ನು ಅನುಸರಿಸಿ, ಒಂದು ರೋಸ್ಟರ್ ವರ್ತುಲದಲ್ಲಿ ಗರಿಷ್ಠ 9 ಹೆಚ್ಚುವರಿ ಬಿಂದುಗಳನ್ನು ಹಾಗೂ ಪರಿಶಿಷ್ಟ ಪಂಗಡದ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ಒದಗಿಸಲು 33 ರೋಸ್ಟರ್ ಬಿಂದುಗಳ

ವರ್ತುಲದಲ್ಲಿ ಹಾಲಿ ನಿಗದಿಪಡಿಸಿರುವ 2ನೇ ಬಿಂದುವಿನ ಜೊತೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆಗೆ ಸೀಮಿತಗೊಳಿಸಿ ಅರ್ಹ ನೌಕರರ ಲಭ್ಯತೆಯನ್ನು ಅನುಸರಿಸಿ ಒಂದು ರೋಸ್ಟರ್ ವರ್ತುಲದಲ್ಲಿ ಗರಿಷ್ಠ 1 ಹೆಚ್ಚುವರಿ ಬಿಂದುವನ್ನು ಪರಿಗಣಿಸಿ ಬಡ್ತಿ ನೀಡುವಂತೆ ಆದೇಶಿಸಲಾಗಿದೆ.

3. ಇಲಾಖೆಗಳಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯ ಖಚಿತಪಡಿಸುವುದಕ್ಕಾಗಿ ಮತ್ತು 1978ರಿಂದ ರಾಜ್ಯದಲ್ಲಿ ಮೀಸಲಾತಿ ನೀತಿಯ ಆಧಾರದ ಮೇಲೆ ಬಡ್ತಿಗೊಂಡ ನೌಕರರ ತತ್ಪರಿಣಾಮವಾದ ಜೇಷ್ಠತೆಯನ್ನು ಒದಗಿಸುವುದಕ್ಕಾಗಿ ರಾಜ್ಯ ಸರ್ಕಾರವು ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017 ವನ್ನು ಉಲ್ಲೇಖಿತ (4)ರ ದಿನಾಂಕ 23.06.2018ರ ಅಧಿಸೂಚನೆಯಲ್ಲಿ ಜಾರಿಗೊಳಿಸಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬಿ. ಕೆ. ಪವಿತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 10-05-2019 ರಂದು ಅಂತಿಮ ತೀರ್ಪು ನೀಡಿ 2017ರ ಅಧಿನಿಯಮದ ಸಿಂಧುತ್ವವನ್ನು ಎತ್ತಿ ಹಿಡಿದಿರುತ್ತದೆ.

4. ಈ ಹಿನ್ನೆಲೆಯಲ್ಲಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಉಲ್ಲೇಖಿತ (2) ಮತ್ತು (3)ರ ಸರ್ಕಾರಿ ಆದೇಶಗಳ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿದೆ. ಮುಂದುವರೆದು, ಉಲ್ಲೇಖಿತ (4)ರ ಅಧಿಸೂಚನೆಯಲ್ಲಿ ಹೊರಡಿಸಲಾದ 2017ರ ಅಧಿನಿಯಮವನ್ನು ಸಹ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸುವಂತೆ ಸೂಚಿಸಲಾಗಿದೆ. ಇದರಲ್ಲಿ ಯಾವುದೇ ಲೋಪ ಉಂಟಾದಲ್ಲಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರೇ ನೇರ ಹೊಣೆಗಾರರಾಗಿರುತ್ತಾರೆ ಎಂದು ತಿಳಿಸಲಾಗಿದೆ.

5. ಈ ಸೂಚನೆಯು ಸ್ವಾಯತ್ತ ಸಂಸ್ಥೆಗಳು/ ವಿಶ್ವವಿದ್ಯಾಲಯಗಳು / ಸಾರ್ವಜನಿಕ ಉದ್ದಿಮೆ/ ಆಯೋಗ/ ನಿಗಮ / ಮಂಡಳಿಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುವ ಸಂಸ್ಥೆಗಳಿಗೂ ಅನ್ವಯವಾಗುತ್ತದೆ ಎಂದು ತಿಳಿಸಲಾಗಿದೆ.

Hemalatha P.

(ಹೇಮಲತ ಪಿ.)
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-ವಿಶೇಷ ಕೋಶ)

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು ( ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.

2. ಪ್ರಧಾನ ಮಹಾಲೇಖಪಾಲರು ( ಇ & ಆರ್ ಎಸ್ ಎ ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
3. ಪ್ರಧಾನ ಮಹಾಲೇಖಪಾಲರು ( ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು-560001.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಮಾನ್ಯ ಅಡ್ವೋಕೇಟ್ ಜನರಲ್ ರವರು, ಕರ್ನಾಟಕ ಸರ್ಕಾರ, ಉಚ್ಚ ನ್ಯಾಯಾಲಯದ ಕಟ್ಟಡಗಳ ಸಂಕೀರ್ಣ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು.
8. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು.
9. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ಜಿಲ್ಲಾಧಿಕಾರಿಗಳು/ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು/ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
10. * ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು-1.
11. * ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-1.
12. * ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು-560 001.
13. * ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು.
14. * ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-560001.
15. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು), ವಿಧಾನ ಸೌಧ, ಬೆಂಗಳೂರು.
16. ಶಾಖಾ ರಕ್ಷಾ ಕಡತ: ಬಿಡಿ ಪ್ರತಿಗಳು.

ಡಾ. ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ

**Dr. N. NAGAMBIKA DEVI,** IAS
Additional Chief Secretary to Government

ಕರ್ನಾಟಕ ಸರ್ಕಾರ
Government of Karnataka

ಸಮಾಜ ಕಲ್ಯಾಣ ಇಲಾಖೆ
**Social Welfare Departm**

ಅ.ಸ.ಪ.ಸಂಖ್ಯೆ : ಸಕಇ 86 ಎಸ್‌ಬಿಸಿ 2020 ದಿನಾಂಕ:06.09.2021

ಮಾನ್ಯರೇ,

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 21.01.2021 ರಂದು ಮಾನ್ಯ ಸಮಾಜ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

- ಎಲ್ಲಾ ಇಲಾಖೆಗಳು ಮುಂಬಡ್ತಿ ನೀಡುವಾಗ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 29 ಎಸ್‌ಬಿಸಿ 77, ದಿನಾಂಕ :27.04.1978 ರ ಆದೇಶದಂತೆ ಮುಂಬಡ್ತಿ ನೀಡುವುದು
- ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ: 03.02.1999, ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ:13.04.1999 ರ ಆದೇಶಗಳು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಮಾತ್ರ ಎಂದು ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ 11 ಸೇಹಿಮ 2001, ದಿನಾಂಕ:18.05.2001 ರಲ್ಲಿ ಸ್ಪಷ್ಟಪಡಿಸಿರುವುದರಿಂದ, ಸದರಿ ಆದೇಶಗಳನ್ನು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಮಾತ್ರ ಅನುಸರಿಸತಕ್ಕದ್ದು ಮತ್ತು ಮುಂಬಡ್ತಿಗೆ ಹಾಗೂ ತತ್ಪರಿಣಾಮವಾದ ಜ್ಯೇಷ್ಠತೆಗೆ ಸಂಬಂಧಿಸಿರುವುದಿಲ್ಲ.
- ಮುಂಬಡ್ತಿ ನೀಡುವಾಗ ಮಂಜೂರಾದ ವೃಂದ ಬಲವನ್ನು ಮಾತ್ರ ಪರಿಗಣಿಸತಕ್ಕದ್ದು, ಕಾರ್ಯನಿರ್ವಹಿಸುತ್ತಿರುವ ಸಂಖ್ಯಾಬಲವನ್ನು ಪರಿಗಣಿಸತಕ್ಕದ್ದಲ್ಲ.
- ಸಾಮಾನ್ಯ ಅರ್ಹತೆಯಡಿಯಲ್ಲಿ ಜ್ಯೇಷ್ಠತೆ ಆಧಾರದಲ್ಲಿ ಮುಂಬಡ್ತಿ ಹೊಂದಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಶೇ.15 ಮತ್ತು ಶೇ.3 ಕ್ಕೆ ಪರಿಗಣಿಸುವಂತಿಲ್ಲ.

ಮಾನ್ಯ ಸಮಾಜ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನಗಳ ನಡವಳಿಯನ್ನು ಲಗತ್ತಿಸಿ, ಎಲ್ಲಾ ಇಲಾಖೆಗಳಿಗೆ ದಿನಾಂಕ: 23.09.2021, 12.03.2021, 19.04.2021, 25.08.2021 ರಂದು ಸಮಾಜ ಕಲ್ಯಾಣ ಇಲಾಖೆಯಿಂದ ಪತ್ರ ಬರೆಯಲಾಗಿದೆ. ಆದಾಗ್ಯೂ, ಕೆಲವು ಇಲಾಖೆಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ: 03.02.1999, ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ:13.04.1999 ರ ಆದೇಶಗಳನ್ನು ಅನ್ವಯಿಸಿ ಕಾರ್ಯನಿರತ ವೃಂದ ಬಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರಾತಿನಿಧ್ಯತೆ ಶೇ.15 ಮತ್ತು ಶೇ.3 ರಷ್ಟಿದ್ದಲ್ಲಿ ರೋಸ್ಟರ್ ಪದ್ಧತಿಯನ್ನು ಅಳವಡಿಸಿದ ಮೀಸಲಾತಿ ಬಿಂದುವಿನ ಎದುರು ಸಾಮಾನ್ಯ ವರ್ಗದ ನೌಕರರನ್ನು ಪದೋನ್ನತಿಗೆ ಪರಿಗಣಿಸಿ ಅಂತಹ ಮೀಸಲಾತಿ ಬಿಂದುಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸದೆ ಮುಂಬಡ್ತಿ ನೀಡುತ್ತಿರುವ ಬಗ್ಗೆ ದೂರುಗಳು ಸಮಾಜ ಕಲ್ಯಾಣ ಇಲಾಖೆಗೆ ಬಂದಿರುತ್ತದೆ. ಆದ್ದರಿಂದ, ಮುಂಬಡ್ತಿ ನೀಡುವಾಗ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 29 ಎಸ್‌ಬಿಸಿ 77, ದಿನಾಂಕ:27.04.1978 ಹಾಗೂ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 22 ಎಸ್‌ಬಿಸಿ 79, ದಿನಾಂಕ: 30.08.1979 ರ ಅನ್ವಯವೇ ಕಡ್ಡಾಯವಾಗಿ ಮೀಸಲಾತಿ ಬಿಂದುಗಳನ್ನು ಅಳವಡಿಸಿ ಮುಂಬಡ್ತಿ ನೀಡಬೇಕು. ಮೀಸಲಾತಿ ರೋಸ್ಟರ್ ಪಾಲಿಸದೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಂಡಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಇವರಿಗೆ:
ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/
ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.

ಕೊಠಡಿ ಸಂ.: 232/233, 2ನೇ ಮಹಡಿ, ವಿಕಾಸ ಸೌಧ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
Room No.: 232/233, 2nd Floor, Vikasa Soudha, Dr. B.R. Ambedkar Veedhi, Bengaluru-560 001

ದಿನಾಂಕ: 01.09.2021 ರಂದು ಬೆಳಿಗ್ಗೆ 11.30 ಗಂಟೆಗೆ ಕೊಠಡಿ ಸಂಖ್ಯೆ : 232, 2ನೇ ಮಹಡಿ, ವಿಕಾಸಸೌಧ, ಬೆಂಗಳೂರು ಇಲ್ಲಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸರ್ಕಾರಿ ನೌಕರರಿಗೆ ಕರ್ನಾಟಕ (ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರ ತತ್ಪರಿಣಾಮವಾದ ಜ್ಯೇಷ್ಠತೆಯನ್ನು ವಿಸ್ತರಿಸುವ ಕಾಯ್ದೆಯನ್ನು ಅನುಷ್ಠಾನಗೊಳಿಸುವ ಬಗ್ಗೆ, ಹಾಗೂ ಉಡುಪಿ ಜಿಲ್ಲಾಧಿಕಾರಿಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ: 04.08.2021 ರಂದು ನೀಡಿರುವ ಸ್ಪಷ್ಟೀಕರಣದ ಬಗ್ಗೆ, ಮತ್ತು ದಿನಾಂಕ: 21.01.2021 ರಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ಸಭೆ ನಡೆಸಿ ಕೈಗೊಂಡಿರುವ ತೀರ್ಮಾನದಂತೆ ಚರ್ಚಿಸಲು ನಡೆದ ಸಭೆಯ ನಡವಳಿಗಳು.

******

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :-

1. ಡಾ. ನಾಗಾಂಬಿಕಾದೇವಿ ಎನ್, ಭಾ.ಆ.ಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
2. ಡಾ. ಇ. ವೆಂಕಟಯ್ಯ, ಭಾ.ಆ.ಸೇ, ಎಸ್‌ಸಿಎಸ್‌ಪಿ/ಟಿಎಸ್‌ಪಿ ನೋಡಲ್ ಏಜೆನ್ಸಿ, ಸಲಹೆಗಾರರು
3. ಡಾ. ರವಿಕುಮಾರ್ ಸುರಪುರ, ಭಾ.ಆ.ಸೇ, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ.
4. ಶ್ರೀ ಪಿ.ಎಸ್. ಕಾಂತರಾಜು, ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ
5. ಶ್ರೀ ಪ್ರಸನ್ನಕುಮಾರ್ ಜಿ.ಎಸ್, ಜಂಟಿ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)
6. ಶ್ರೀ ಸಿ. ಪುಟ್ಟನಂಜಯ್ಯ, ಉಪಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
7. ಶ್ರೀ ಡಿ.ಚಂದ್ರಶೇಖರಯ್ಯ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ನೌಕರರ ಸಂಘ, ಬೆಂಗಳೂರು.
8. ಶ್ರೀ ಮಂಜುನಾಥ. ಟಿ.ಆರ್, ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಾತಿಯನ್ನು ಕಲ್ಪಿಸುವ ಸಂದರ್ಭದಲ್ಲಿ ರೋಸ್ಟರ್ ಬಿಂದುಗಳನ್ನು ಅನುಸರಿಸಿ ಮುಂಬಡ್ತಿ ನೀಡುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77, ದಿನಾಂಕ: 27.04.1978 ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿ ಮುಂಬಡ್ತಿಯಲ್ಲಿ ಜೂನಿಯರ್ ಕ್ಲಾಸ್-1 ಹುದ್ದೆಯವರೆಗೆ ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಅದರಂತೆ, ಮುಂಬಡ್ತಿಯಲ್ಲಿ ಮೀಸಲಾತಿಯನ್ನು ನೀಡುವ ಇರುವ ಸಂಬಂಧ ಸಮಾಜ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

1. ಎಲ್ಲಾ ಇಲಾಖೆಗಳು ಮುಂಬಡ್ತಿ ನೀಡುವಾಗ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77 ಬೆಂಗಳೂರು, ದಿನಾಂಕ: 27.04.1978 ರ ಆದೇಶದಂತೆ ಮುಂಬಡ್ತಿ ನೀಡುವುದು.
2. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಾಗ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 10 ಎಸ್‌ಬಿಸಿ 97 ಬೆಂಗಳೂರು, ದಿನಾಂಕ: 24.06.1997 ಮತ್ತು ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ ಸಿಆಸುಇ 23(I) ಸೇನೇನಿ ದಿನಾಂಕ: 04.03.2015ರ ಆದೇಶಗಳನ್ನು ಪಾಲಿಸಲು ಸೂಚನೆ ನೀಡುವುದು.
3. ದಿನಾಂಕ: 03.02.1999 ಹಾಗೂ 13.04.1999 ರ ಆದೇಶಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಮಾತ್ರ ವಿವರಿಸಲಾಗಿದೆ ಎಂದು ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ 11 ಸೇಇಮು 2001, ದಿನಾಂಕ: 18.05.2001ರ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿರುವುದರಿಂದ, ಸದರಿ ಆದೇಶಗಳನ್ನು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಮಾತ್ರ ಅನುಸರಿಸತಕ್ಕದ್ದು ಮತ್ತು ಮುಂಬಡ್ತಿಗೆ ಹಾಗೂ ತತ್ಪರಿಣಾಮ ಜ್ಯೇಷ್ಠತೆಗೆ ಸಂಬಂಧಿಸಿರುವುದಿಲ್ಲ.

4. ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯದಂತೆ ಕೂಡಲೇ ದಿನಾಂಕ: 24.06.2019 ರ ಸುತ್ತೋಲೆ ಹಿಂಪಡೆಯುವುದು. ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 21 ಎಸ್‌ಬಿಸಿ 97 ದಿನಾಂಕ: 13.04.1999ರ ಬಗ್ಗೆ, ಮುಂಬಡ್ತಿಗೆ ಮಂಜೂರಾದ ವೃಂದಬಲ ಮಾತ್ರ ಪರಿಗಣಿಸತಕ್ಕದ್ದು ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಖ್ಯಾಬಲವನ್ನು ಪರಿಗಣಿಸತಕ್ಕದ್ದಲ್ಲ ಎಂದು ತಿದ್ದುಪಡಿ ಆದೇಶ ಹೊರಡಿಸುವುದು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಮೀಸಲಾತಿ/ ಬಡ್ತಿ ಬಗ್ಗೆ ಆದೇಶ/ ಸುತ್ತೋಲೆಗಳನ್ನು ಹೊರಡಿಸುವ ಮುನ್ನ ಸಮಾಜ ಕಲ್ಯಾಣ ಇಲಾಖೆಯ ಸಹಮತಿ ಪಡೆಯುವುದು. ಮುಂದುವರೆದು, ದಿನಾಂಕ: 21.01.2021 ರ ಸಭೆಯ ನಡವಳಿಯನ್ನು ಲಗತ್ತಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸರ್ಕಾರದಿಂದ ದಿನಾಂಕ:23.02.2021 ರಂದು ಅನುಪಾಲನಾ ವರದಿ ಸಲ್ಲಿಸುವಂತೆ ಕೋರಲಾಗಿತ್ತು. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆಯಿಂದ ದಿನಾಂಕ: 12.03.2021, 19.04.2021, 25.06.2021ರಲ್ಲಿ ಮಾನ್ಯ ಸಚಿವರು ಸೂಚಿಸಿರುವಂತೆ ಕ್ರಮಕೈಗೊಂಡು ಅನುಪಾಲನಾ ವರದಿ ಸಲ್ಲಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಪತ್ರ ಬರೆಯಲಾಗಿದೆ. ಆದರೆ, ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಮುಂದುವರೆದು, ಸದರಿ ಸಭೆಯ ತೀರ್ಮಾನಗಳಿಗೆ ವ್ಯತಿರಿಕ್ತವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ: 04.08.2021 ರಂದು ಉಡುಪಿ ಜಿಲ್ಲಾಧಿಕಾರಿಗಳಿಗೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿರುತ್ತಾರೆ.

| | | |
|---|---|---|
| 1 | ಮುಂಬಡ್ತಿಯಿಂದಾಗಿ ಕಾರ್ಯನಿರತ ವೃಂದ ಬಲದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಸಿಬ್ಬಂದಿಗಳ ಸಂಖ್ಯೆ ಕ್ರಮವಾಗಿ ಶೇ.15 ಹಾಗೂ ಶೇ. 3ರ ಪ್ರಮಾಣ ತಲುಪಿದ ಬಳಿಕ ರೋಸ್ಟರ್ ನಿಯಮದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಿಬ್ಬಂದಿಗಳಿಗೆ ಪದೋನ್ನತಿಯನ್ನು (ಶೇ.15 ಹಾಗೂ ಶೇ.3 ರನ್ನು ಮೀರಿ) ಮುಂದುವರೆಸಲು ಅವಕಾಶವಿದೆಯೇ? | ಮುಂಬಡ್ತಿ ನೀಡುವ ಸಂದರ್ಭದಲ್ಲಿ ಮುಂಬಡ್ತಿ ನೀಡುವ ವೃಂದದಲ್ಲಿ ಆ ವೃಂದದ ಕಾರ್ಯನಿರತ ವೃಂದಬಲದಲ್ಲಿ (Woking Strength) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ನೌಕರರ ಪ್ರಾತಿನಿಧ್ಯತೆ ನಿಗದಿಪಡಿಸಿದ ಶೇ.15 ಮತ್ತು ಶೇ.3 ರನ್ನು ತಲುಪಿದ್ದಲ್ಲಿ ಮುಂಬಡ್ತಿಯನ್ನು ನೀಡಬೇಕಾಗಿರುತ್ತದೆ. ಆದರೆ, ಮೀಸಲಾತಿ ರೋಸ್ಟರ್‌ನ್ನು ಅನುಸರಿಸುವ ಅಗತ್ಯವಿರುವುದಿಲ್ಲ. |
| 2. | ಮೇಲಿನಂತೆ ಶೇ. 15 ಮತ್ತು ಶೇ.3 ರನ್ನು ಮೀರಿ ಪದೋನ್ನತಿ ನೀಡಲು ಅವಕಾಶ ಇಲ್ಲದೇ ಇದ್ದಲ್ಲಿ, ರೋಸ್ಟರ್ ವಹಿಯಲ್ಲಿ ರೋಸ್ಟರ್ ಬಿಂದುಗಳನ್ನು ಅಳವಡಿಸುವ ವಿಧಾನವೇನು? ರೋಸ್ಟರ್ ಬಿಂದುಗಳನ್ನು ಖಾಲಿ ಬಿಡಬೇಕೇ ಅಥವಾ ರೋಸ್ಟರ್ ಪದ್ಧತಿಯನ್ನು ಅಳವಡಿಸದೇ ಪದೋನ್ನತಿ ನೀಡಬೇಕೇ? | ಕಾರ್ಯನಿರತ ವೃಂದ ಬಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಪ್ರಾತಿನಿಧ್ಯತೆ ಶೇ.15 ಮತ್ತು ಶೇ.3 ರಷ್ಟು ಇದ್ದಲ್ಲಿ, ರೋಸ್ಟರ್ ಪದ್ಧತಿಯನ್ನು ಅಳವಡಿಸದೇ ಮೀಸಲಾತಿ ಪದೋನ್ನತಿ ನೀಡಬೇಕು. ಮೀಸಲಾತಿ ಬಿಂದುವಿನ ಎದುರು ಸಾಮಾನ್ಯ ವರ್ಗದ ನೌಕರರನ್ನು ಪದೋನ್ನತಿಗೆ ಪರಿಗಣಿಸಬಹುದಾಗಿರುತ್ತದೆ ಹಾಗೂ ಆ ಮೀಸಲಾತಿ ಬಿಂದುಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸುವ ಅವಶ್ಯಕತೆ ಇರುವುದಿಲ್ಲ. |

| | | |
|---|---|---|
| 3. | ನೇರ ನೇಮಕಾತಿಯಲ್ಲಿ ಕೆಪಿಎಸ್‌ಸಿ ಮುಖಾಂತರ ಅಥವಾ ಅನುಕಂಪದ ಆಧಾರದಲ್ಲಿ ಪರಿಶಿಷ್ಟ ಜಾತಿಯ ಹಾಗೂ ಪಂಗಡದ ಸಿಬ್ಬಂದಿಗಳು ಖಾಲಿ ಹುದ್ದೆಗಳಿಗೆ ಎದುರಾಗಿ ಭರ್ತಿಯಾದ ಸಂದರ್ಭದಲ್ಲಿ ಒಂದು ವೃಂದದಲ್ಲಿ: ಉದಾಹರಣೆಗೆ : ಪ್ರದಸ ವೃಂದದಲ್ಲಿ ಕಾರ್ಯನಿರತ ಶೇ.15 ಪರಿಶಿಷ್ಟ ಜಾತಿಯ ಸಿಬ್ಬಂದಿಗಳು ಇದ್ದು, ಹೊಸದಾಗಿ ನೇಮಕಾತಿಯಾಗಿ 3 ಪರಿಶಿಷ್ಟ ಜಾತಿಯ ಸಿಬ್ಬಂದಿಗಳು ಹಾಜರಾಗಿದ್ದಲ್ಲಿ ಕಾರ್ಯನಿರತ ವೃಂದದಲ್ಲಿ ಪರಿಶಿಷ್ಟ ಜಾತಿಯ ಸಿಬ್ಬಂದಿಗಳ ಸಂಖ್ಯೆ ಶೇ.15ನ್ನು ಮೀರುವ ಸಂದರ್ಭಗಳು ಇರುತ್ತದೆ. ಇಂತಹ ಸಂದರ್ಭಗಳಲ್ಲಿ ಮುಂದಿನ ಮುಂಬಡ್ತಿಯಲ್ಲಿ ನೇರನೇಮಕಾತಿ ಹುದ್ದೆಯಿಂದ ಭರ್ತಿಯಾದ ಸಿಬ್ಬಂದಿಗಳನ್ನು ಕರ್ತವ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಯ ಸಿಬ್ಬಂದಿಗಳ ಶೇಕಡಾವಾರು ಪ್ರಮಾಣಕ್ಕೆ ಆ ಕಾರ್ಯನಿರತ ವೃಂದದಲ್ಲಿ ಪರಿಗಣಿಸಬೇಕೆ? | ದಿನಾಂಕ: 27.04.1978ರ ಸರ್ಕಾರಿ ಆದೇಶ ಸಂಖ್ಯೆ : ಡಿಪಿಎಆರ್ 29 ಎಸ್‌ಬಿಸಿ 77ರನ್ವಯ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡಲಾಗುವ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಕ್ರಮವಾಗಿ ಶೇ.15 ಮತ್ತು ಶೇ.3 ರ ಪ್ರಮಾಣದಲ್ಲಿ ಮೀಸಲಾತಿ ಕಲ್ಪಿಸಲಾಗಿರುತ್ತದೆ. ಈ ಮುಂಬಡ್ತಿ ಮೀಸಲಾತಿಯು ಗ್ರೂಪ್-ಎ ಕನಿಷ್ಠ ದರ್ಜೆಯ ವೃಂದವೂ ಒಳಗೊಂಡಂತೆ ಆ ವೃಂದದವರೆಗಿನ ಇತರ ಎಲ್ಲಾ ವೃಂದಗಳಿಗೂ ಅನ್ವಯವಾಗುತ್ತದೆ. ಆದರೆ, ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ, ನೇರ ನೇಮಕಾತಿ ಮತ್ತು ಮುಂಬಡ್ತಿಗೆ ಕೋಟಾವನ್ನು ನಿಗದಿಪಡಿಸಿದ್ದಲ್ಲಿ ನೇರ ನೇಮಕಾತಿಯ ಪಾಲು ಶೇ.75 ರಷ್ಟನ್ನು ಮೀರಿದ್ದಲ್ಲಿ, ಆ ವೃಂದಕ್ಕೆ ಮುಂಬಡ್ತಿಮೀಸಲಾತಿ ಅನ್ವಯವಾಗುವುದಿಲ್ಲ. ಮುಂಬಡ್ತಿ ಹೊಂದುವ ವೃಂದದ ಒಟ್ಟು ಕಾರ್ಯನಿರತ ವೃಂದ ಬಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಪ್ರಾತಿನಿಧ್ಯತೆ ಶೇ.15 ಹಾಗೂ ಶೇ.3 ರಷ್ಟನ್ನು ಲಕ್ಷ್ಯ ಹಾಕಬೇಕಾಗಿರುತ್ತದೆ. |
| 4. | ಒಂದು ವೃಂದಕ್ಕೆ ಬಡ್ತಿ ನೀಡುವ ಸಂದರ್ಭದಲ್ಲಿ ಶೇ.15 ಹಾಗೂ ಶೇ.3ರನ್ನು "ವೃಂದದ ಕಾರ್ಯ ಬಲದ ಆಧಾರದಲ್ಲಿ ಮೀಸಲಾತಿ ಶೇಕಡಾವನ್ನು ನಿರ್ಧರಿಸ ಬೇಕಿರುತ್ತದೆ" ಎಂಬುದಾಗಿ ವಿವರಿಸಿದ್ದು, ಯಾವ ವೃಂದದ ಕಾರ್ಯ ಬಲವನ್ನು ಪರಿಗಣಿಸಬೇಕು: ಪದೋನ್ನತಿ ಹೊಂದುತ್ತಿರುವ ವೃಂದದ ಕಾರ್ಯಬಲವೇ (ಉದಾಹರಣೆಗೆ : ಪ್ರದಸ/ಪ್ರದಲಾ)? ಅಥವಾ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವೃಂದದ ಕಾರ್ಯ ಬಲವೇ ? (ಉದಾಹರಣೆಗೆ : ದ್ವಿದಸ/ಗ್ರಾಮಕರಣಿಕ)? | ಮುಂಬಡ್ತಿ ನೀಡುವ ಸಂದರ್ಭದಲ್ಲಿ, ಮುಂಬಡ್ತಿ ನೀಡುವ ವೃಂದದಲ್ಲಿ ಆ ವೃಂದದ ಕಾರ್ಯನಿರತ ವೃಂದಬಲದಲ್ಲಿ (Woking Strength) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ನೌಕರರ ಪ್ರಾತಿನಿಧ್ಯತೆ ನಿಗದಿಪಡಿಸಿದ ಶೇ.15 ಮತ್ತು ಶೇ.3ನ್ನು ಲಕ್ಷ್ಯ ಹಾಕಬೇಕಾಗಿರುತ್ತದೆ. ಉದಾಹರಣೆಗೆ : ದ್ವಿದಸ ಹುದ್ದೆಯಿಂದ ಪ್ರದಸ ಹುದ್ದೆಗೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ, ಪ್ರದಸ ವೃಂದದ ಕಾರ್ಯನಿರತ ವೃಂದಬಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರಾತಿನಿಧ್ಯತೆಯನ್ನು ಪರಿಗಣಿಸಬೇಕಾಗುತ್ತದೆ. |

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಮಾತನಾಡುತ್ತಾ, ಮೇಲ್ಕಂಡ ಸ್ಪಷ್ಟೀಕರಣದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಕಲ್ಪಿಸುವಲ್ಲಿ ಅನ್ಯಾಯವಾಗಿರುವುದಾಗಿ ಸಭೆಯ ಗಮನಕ್ಕೆ ತಿಳಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಶ್ರೀ ಡಿ.ಚಂದ್ರಶೇಖರಯ್ಯ, ನಿರ್ದೇಶಕರು, ಯೋಜನಾ ಇಲಾಖೆ, ಪ್ರದೇಶಾಭಿವೃದ್ಧಿ ಮಂಡಳಿ ಇವರು ಮಾತನಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸರ್ಕಾರಿ ನೌಕರರಿಗೆ ಕರ್ನಾಟಕ (ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಕಾಯ್ದೆಗೆ ಗೌರವಾನ್ವಿತ ರಾಷ್ಟ್ರಪತಿಗಳು ಅಂಕಿತ ಹಾಕಿದ್ದು, ಸದರಿ ಕಾಯ್ದೆಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎತ್ತಿಹಿಡಿದಿರುವುದಾಗಿ ತಿಳಿಸಿದರು. ದಿನಾಂಕ: 21.01.2021 ರಂದು

ಮಾನ್ಯ ಸಮಾಜ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ: 03.02.1999, ಡಿಪಿಎಆರ್ 21 ಎಸ್‌ಬಿಸಿ 97. ದಿನಾಂಕ:13.04.1999 ಹಾಗೂ ಸಿಬ್ಬಂದಿ ಮತ್ತು ಸುಧಾರಣೆ ಇಲಾಖೆಯ ಸುತ್ತೋಲೆ ದಿನಾಂಕ 24.06.2019ರ ಆದೇಶಗಳನ್ನು ಹಿಂಪಡೆದು ಪರಿಷ್ಕೃತ ಆದೇಶವನ್ನು ಹೊರಡಿಸಲು ಮಾನ್ಯ ಸಚಿವರು ಸೂಚಿಸಿದ್ದು, ಅಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಯವರು ಕೂಡಲೇ ಆದೇಶ ಹೊರಡಿಸುವುದಾಗಿ ತಿಳಿಸಿದ್ದರು. ಆದರೆ, ಇದುವರೆಗೂ ಸದರಿ ಆದೇಶವನ್ನು ಹೊರಡಿಸಿರುವುದಿಲ್ಲ. ಮೇಲಾಗಿ ಉಡುಪಿ ಜಿಲ್ಲಾಧಿಕಾರಿಗಳಿಗೆ ಕಾರ್ಯ ನಿರತ ವೃಂದ ಬಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಪ್ರಾತಿನಿಧ್ಯತೆಯು ಶೇ.15 ಮತ್ತು ಶೇ.3 ಇದ್ದಲ್ಲಿ ಮುಂಬಡ್ತಿಯಲ್ಲಿ ಮೀಸಲಾತಿ ನೀಡುವಲ್ಲಿ ಅಗತ್ಯವಿಲ್ಲವೆಂದು ದಿನಾಂಕ: 04.08.2021 ರಲ್ಲಿ ಸ್ಪಷ್ಟೀಕರಣ ನೀಡಿರುತ್ತಾರೆ. ಇದರಿಂದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ನೀಡುವಲ್ಲಿ ಅನ್ಯಾಯವಾಗುತ್ತಿದ್ದು, ಕೂಡಲೇ ಇದನ್ನು ತಡೆಹಿಡಿಯಬೇಕೆಂದು ಕೋರಿರುತ್ತಾರೆ. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ: 03.02.1999, ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ:13.04.1999 ಹಾಗೂ ಸಿಬ್ಬಂದಿ ಮತ್ತು ಸುಧಾರಣೆ ಇಲಾಖೆಯ ಸುತ್ತೋಲೆ ದಿನಾಂಕ: 24.06.2019ರ ಆದೇಶಗಳನ್ನು ಪಾಲಿಸಿ ನಡೆಸುವ ಇಲಾಖಾ ಮುಂಬಡ್ತಿ ಸಭೆಗಳನ್ನು ತಡೆಹಿಡಿಯುವಂತೆ ಕೋರಿದರು.

ಅಧ್ಯಕ್ಷರು, ಕರ್ನಾಟಕ ಎಸ್‌ಸಿ / ಎಸ್‌ಟಿ ಎಂಪ್ಲಾಯಿಸ್ ಫೆಡರೇಷನ್ ಇವರು ಮಾತನಾಡಿ, ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಾತಿಯನ್ನು ನೀಡುತ್ತಿಲ್ಲವೆಂದು ಹಾಗೂ ದಿನಾಂಕ: 18.09.2020 ರಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ನೀಡಿರುವ ಹಿಂಬರಹದಲ್ಲಿ ನೇರ ನೇಮಕಾತಿ, ಮುಂಬಡ್ತಿ ರೋಸ್ಟರ್ ಪಟ್ಟಿ ಹಾಗೂ ವೇಕೆನ್ಸಿ ರಿಜಿಸ್ಟರ್‌ನ್ನು ನಿರ್ವಹಿಸಿರುವುದಿಲ್ಲವೆಂದು ತಿಳಿಸಿರುತ್ತದೆ. ಮೀಸಲಾತಿ ನಿಯಮಗಳ ಉಲ್ಲಂಘನೆಯಾಗಿದ್ದು, ಈ ಕುರಿತು ಕ್ರಮಕೈಗೊಳ್ಳುವಂತೆ ಕೋರಿದರು.

ಎಸ್‌ಸಿ ಎಸ್‌ಪಿ /ಟಿಎಸ್‌ಪಿ ನೋಡಲ್ ಸಲಹೆಗಾರರು ಮಾತನಾಡುತ್ತಾ, ದಿನಾಂಕ: 21.01.2021 ರ ಸಭೆಯಲ್ಲಿಯೇ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ: 03.02.1999. ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ:13.04.1999 ಹಾಗೂ ಸಿಬ್ಬಂದಿ ಮತ್ತು ಸುಧಾರಣೆ ಇಲಾಖೆಯ ಸುತ್ತೋಲೆ ದಿನಾಂಕ: 24.06.2019ರ ಆದೇಶಗಳನ್ನು ಹಿಂಪಡೆಯುವಂತೆ ಸೂಚಿಸಲಾಗಿದೆ. ಮುಂದುವರೆದು, ಸಾಮಾನ್ಯ ಅರ್ಹತೆಯಲ್ಲಿ ಮುಂಬಡ್ತಿ ಹೊಂದಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರನ್ನು ಶೇ.15 ಮತ್ತು ಶೇ.3 ರ ಪ್ರಾತಿನಿಧ್ಯತೆಗೆ ಪರಿಗಣಿಸುವಂತಿಲ್ಲ, ಹಾಗೂ ಮುಂಬಡ್ತಿ ನೀಡುವಾಗ ಕಾರ್ಯನಿರತ ವೃಂದ ಬಲವನ್ನು ಪರಿಗಣಿಸದೆ ಮಂಜೂರಾದ ವೃಂದ ಬಲವನ್ನು ಪರಿಗಣಿಸುವಂತೆ ಸೂಚಿಸಲಾಗಿದೆ. ಈ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆದೇಶಗಳನ್ನು ನೀಡಿದೆ ಎಂದು ಸಭೆಗೆ ತಿಳಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ಮಾತನಾಡಿ, ದಿನಾಂಕ: 21.01.2021 ರಲ್ಲಿಯೇ ಮಾನ್ಯ ಸಚಿವರು ಆದೇಶ ನೀಡಿದ್ದರೂ ಇದುವರೆಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯವರು ಕ್ರಮ ಕೈಗೊಳ್ಳದೇ ಇರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಸಭೆಯಲ್ಲಿ ಹಾಜರಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಕಾರಿ ಮಾತನಾಡಿ ಈ ಸಂಬಂಧ ಸುತ್ತೋಲೆ ಹೊರಡಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಎಂದು ತಿಳಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ಮಾತನಾಡಿ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಉಡುಪಿ ಜಿಲ್ಲಾಧಿಕಾರಿಗಳಿಗೆ ದಿನಾಂಕ: 04.08.2021 ರಂದು ಮೀಸಲಾತಿ ಬಿಂದುವಿನ ಎದುರು ಸಾಮಾನ್ಯ ವರ್ಗದ ನೌಕರರನ್ನು ಪದೋನ್ನತಿಗೆ ಪರಿಗಣಿಸಬಹುದಾಗಿರುತ್ತದೆ ಹಾಗೂ ಆ ಮೀಸಲಾತಿ ಬಿಂದುಗಳನ್ನು ಬ್ಯಾಕ್‌ಲಾಗ್ ಎಂದು

..5

ಪರಿಗಣಿಸುವುದು ಅಗತ್ಯವಿಲ್ಲವೆಂದು, ಮೀಸಲಾತಿ ಅನುಸರಿಸುವುದು ಅಗತ್ಯವಿಲ್ಲವೆಂದು ಸ್ಪಷ್ಟೀಕರಣ ನೀಡಿರುವುದನ್ನು ಯಾವುದೇ ಕಾರಣಕ್ಕೂ ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ಹಾಗೂ ಕೂಡಲೇ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ: 03.02.1999, ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ:13.04.1999 ಹಾಗೂ ಸಿಬ್ಬಂದಿ ಮತ್ತು ಸುಧಾರಣೆ ಇಲಾಖೆಯ ಸುತ್ತೋಲೆ ದಿನಾಂಕ: 24.06.2019ರ ಆದೇಶಗಳನ್ನು ಹಾಗೂ ಉಡುಪಿ ಜಿಲ್ಲಾಧಿಕಾರಿಗೆ ನೀಡಿರುವ ಸ್ಪಷ್ಟೀಕರಣವನ್ನು ಹಿಂಪಡೆದು ಪರಿಷ್ಕೃತ ಆದೇಶವನ್ನು ಹೊರಡಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸೂಚಿಸಿದರು ಹಾಗೂ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಲು ಕಡತವನ್ನು ಮಂಡಿಸುವಂತೆ ಸರ್ಕಾರದ ಉಪ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಸೂಚಿಸಿದರು.

ಮುಂದುವರೆದು, ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77, ದಿನಾಂಕ: 27.04.1978 ರ ಆದೇಶದಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 22 ಎಸ್‌ಬಿಸಿ 79, ದಿನಾಂಕ: 30.08.1979 ರನ್ವಯ ಮೀಸಲಾತಿ ರೋಸ್ಟರ್‌ನ್ನು ಕಡ್ಡಾಯವಾಗಿ ಪಾಲಿಸಿ ಮುಂಬಡ್ತಿ ನೀಡುವಂತೆ ಹಾಗೂ ಒಂದುವೇಳೆ ಮೀಸಲಾತಿ ರೋಸ್ಟರ್‌ನ್ನು ಪಾಲಿಸದೇ ಇದ್ದಲ್ಲಿ ಅಂತಹ ಇಲಾಖಾ ಮುಂಬಡ್ತಿ ಸಭೆಯ ತೀರ್ಮಾನಕ್ಕೆ ತಡೆಹಿಡಿಯುವುದಾಗಿ ಅರೆ ಸರ್ಕಾರಿ ಪತ್ರ ಬರೆಯುವಂತೆ ಸರ್ಕಾರದ ಉಪ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಸೂಚಿಸಿದರು.

ಮುಂದುವರೆದು, ಉಡುಪಿ ಜಿಲ್ಲಾಧಿಕಾರಿಗಳು ಮಾಹಿತಿ ಹಕ್ಕು ಅಧಿನಿಯಮ ಕಾಯ್ದೆಯಡಿ ದಿನಾಂಕ : 18.09.2020ರಂದು ನೇರ ನೇಮಕಾತಿ, ಮುಂಬಡ್ತಿ ರೋಸ್ಟರ್ ವಹಿ, ವೇಕೆನ್ಸಿ ರಿಜಿಸ್ಟರ್ ನಿರ್ವಹಿಸಿರುವುದಿಲ್ಲವೆಂದು ಹಿಂಬರಹ ನೀಡಿರುವ ಬಗ್ಗೆ, ಕೂಡಲೇ ಜಿಲ್ಲಾಧಿಕಾರಿಗಳಿಗೆ ನೋಟೀಸ್ ನೀಡಿ, ಒಂದುವೇಳೆ ರೋಸ್ಟರ್ ವಹಿ ಹಾಗೂ ವೇಕೆನ್ಸಿ ವಹಿಯನ್ನು ನಿರ್ವಹಿಸದಿದ್ದಲ್ಲಿ ನಿಯಮಾನುಸಾರ ಕ್ರಮ ಜರುಗಿಸುವಂತೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಸೂಚಿಸಿದರು.

ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ನೇಮಕಾತಿ ಪ್ರಾಧಿಕಾರಿಗಳು ರೋಸ್ಟರ್ ವಹಿ ಇರಿಸದಿರುವ ಬಗ್ಗೆ, ಪರಿಶೀಲಿಸಿ ಕ್ರಮಕೈಗೊಳ್ಳಲು ಸೂಚಿಸಿದರು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ. ನಾಗಾಂಬಿಕಾದೇವಿ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ,

ಸಕಇ 86 ಎಸ್‌ಟಿಸಿ 2020